**ದಿನಾಂಕಃ 01-02-2024 ರಂದು ಸಾಕ್ಷಿಗೆ ಪುನಃ ಪ್ರಮಾಣ ವಚನ ಬೋಧಿಸಲಾಯಿತು**

**ಪಾಟೀ ಸವಾಲುಃ ಎದುರುದಾರರ ಪರ ಶ್ರೀ ಜೆಡ್ ಎನ್ ಎಚ್ ವಕೀಲರಿಂದಃ (ಪ್ರಾಥಮಿಕ ವಿವಾದಾಂಶ 1 ರ ಮೇಲೆ ).**

3. ನಾನು ಸಲ್ಲಿಸಿರುವ ಪ್ರಮಾಣ ಪತ್ರದಲ್ಲಿ ಬರೆದಿರುವುದನ್ನು ನಾನು ಓದಿಕೊಂಡು ಸಹಿ ಮಾಡಿದ್ದೇನೆ. ನನ್ನ ಬಳಿ ಇರುವ ಎಲ್ಲಾ ದಾಖಲಾತಿಯನ್ನು ಈಗಾಗಲೇ ಹಾಜರುಪಡಿಸಿದ್ದೇನೆ. ಬೇರೆ ದಾಖಲಾತಿ ಯಾವುದೂ ಹಾಜರು ಪಡಿಸುವುದು ಇಲ್ಲ. ನಾನು ಎದುರುದಾರ ಕಂಪನಿಯಲ್ಲಿ 2000 ನೇ ಸಾಲಿನಲ್ಲಿ ನೌಕರಿಗೆ ಸೇರಿದೆ . ಅದಕ್ಕಿಂತ ಮೊದಲು ನಾನು ಬೇರೆ ಯಾವುದೇ ಕಂಪನಿಯಲ್ಲಿ ಕೆಲಸ ಮಾಡುತ್ತಿರಲಿಲ್ಲ. ನಾನು ನೌಕರಿಗೆ ಸೇರಿದಾಗಿನಿಂದಲೂ ಎದುರುದಾರ ಕಂಪನಿಯಲ್ಲಿ ಆಪರೇಟರ್ ಆಗಿ ಕೆಲಸ ಮಾಡುತ್ತಿದ್ದೇನೆ ಆದರೆ ಬೇರೆ ಬೇರೆ ವಿಭಾಗದಲ್ಲಿ ಆಪರೇಟರ್ ಆಗಿ ಕೆಲಸ ಮಾಡಿದ್ದೇನೆ. ಎದುರುದಾರ ಕಂಪನಿಯಲ್ಲಿ ಬೇರೆ ಬೇರೆ ವಿಭಾಗ ಇತ್ತು ಮತ್ತು ಬೇರೆ ಬೇರೆ ಯಂತ್ರಗಳೂ ಸಹ ಇದ್ದವು . ನನಗೆ ಯಂತ್ರ ಚಾಲನೆ ಮಾಡುವುದನ್ನು ಎದುರುದಾರ ಕಂಪನಿಯಲ್ಲಿಯೇ ತರಬೇತಿ ನೀಡಿದರು. ನಾನು ಮೊದಲು ತರಬೇತಿ ಹೊಂದಿರಲಿಲ್ಲ. ನಾನು ಜೇಷ್ಠತೆ ಹೊಂದಿದ ಮೇಲೆ ಬೇರೆ ನೌಕರರಿಗೆ ಯಂತ್ರ ಚಾಲನೆ ಮಾಡುವ ತರಬೇತಿ ಕೊಟ್ಟಿದ್ದೇನೆ.

4. ನಾನು ಸಂಧಾನ ನಡಾವಳಿಯಲ್ಲಿ ಸಲ್ಲಿಸಿರುವ ಕ್ಲೇಮಿನಲ್ಲಿ ರೂ. 15,00,000/- ಕೇಳಿದ್ದೇನೆ ಎಂದರೆ ಹೌದು . ನಾನು ದಿನಾಂಕ 10.09.2015 ರಂದು 2 ನೇ ಪಾಳಿಗೆ ನೌಕರಿಗೆ ಹಾಜರು ಆದೆ ಎಂದರೆ ಹೌದು . ನಾನು ಆ ದಿನ ರಾತ್ರಿ 11.30 ಗಂಟೆಗೆ ಕಾರ್ಡ್ ಪಂಚ್ ಮಾಡಿದೆ. ಆ ದಿನ 7 ಗಂಟೆ ಅವಧಿಯ ಹೆಚ್ಚುವರಿ ಅವಧಿ ಕೆಲಸದ ಮೇಲೆ ನಾನು ಹಾಜರಾಗಿದ್ದೆ. 2 ನೇ ಪಾಳಿ ಕೆಲಸ ಸಂಜೆ 4.00 ರಿಂದ ಸುಮಾರು ರಾತ್ರಿ 12.30 ಗಂಟೆಗೆ ಮುಗಿಯುತ್ತದೆ .

ಪ್ರಶ್ನೆಃ ಪಾಳಿ ಸಮಯ ಎಷ್ಟು ಗಂಟೆಗೆ ಪ್ರಾರಂಭ ಆಯಿತು? (ಈಗ ಕೇವಲ ಪ್ರಾಥಮಿಕ ವಿವಾದಾಂಶದ ಬಗ್ಗೆ ಸಾಕ್ಷ್ಯ ದಾಖಲು ಮಾಡುತ್ತಿದ್ದು ಈ ಪ್ರಶ್ನೆ ಅಸಮಂಜಸ ಇದೆ ಆದ್ದರಿಂದ ತಿರಸ್ಕರಿಸಲಾಗಿದೆ. ಮುಖ್ಯ ವಿವಾದಾಂಶದ ಬಗ್ಗೆ ಸಾಕ್ಷ್ಯ ದಾಖಲು ಮಾಡುವಾಗ ಈ ಪ್ರಶ್ನೆ ಕೇಳಲು ಅವಕಾಶ ಇರುತ್ತದೆ ).

5. ದಿನಾಂಕ 11.09.2015 ರಂದು ನನ್ನನ್ನು ವಿಚಾರಣೆಗೆ ಶೈಲೇಶ್ ತೆಂಡೂಲ್ಕರ್ ಕರೆದಿದ್ದರು ಎಂದರೆ ಸರಿಯಲ್ಲ. ನಾನು ಈಗ ತೋರಿಸಿದ ನಿ.ಎಂ.4 ಆಪಾದನಾ ಪಟ್ಟಿಯನ್ನು ನೋಡಿದ್ದೇನೆ ಆದರೆ ಯಾವಾಗ ನೋಡಿದೆ ಎಂದು ನೆನಪಿಲ್ಲ. ನಿ.ಎಂ. 4 ಅನ್ನು ನನಗೆ ಜಾರಿ ಮಾಡಿದಾಗ ನಾನು ಅದನ್ನು ತೆಗೆದುಕೊಳ್ಳದೇ ತಿರಸ್ಕರಿಸಿದ್ದೇನೆ ಎಂದರೆ ಸುಳ್ಳು . ಈಗ ತೋರಿಸಿದ ನಿ.ಎಂ. 3 inter office report ಅನ್ನು ನನಗೆ ನೀಡಿದಾಗ ನಾನು ಅದನ್ನು ಪಡೆಯದೇ ತಿರಸ್ಕರಿಸಿದ್ದೇನೆ ಎಂದರೆ ಸುಳ್ಳು . ಶೈಲೇಶ್ ತೆಂಡೂಲ್ಕರ್ ರವರು ಆ ದಿನ ನನಗೆ ನಾನು ಸಂತೋಷ ದೇವಾಡಿಗರವರಿಗೆ ಹೊಡೆದಿದ್ದೇನೆ ಎಂದು ಪ್ರಶ್ನಿಸಿದರು ಎಂದರೆ ಸುಳ್ಳು . ಸಂತೋಷ ದೇವಾಡಿಗ ನನಗೆ ಮೊದಲಿನಿಂದ ಪರಿಚಯ ಇದ್ದ ಈಗಲೂ ಪರಿಚಯ ಇದ್ದಾನೆ. ಸಂತೋಷ ದೇವಾಡಿಗ ನನ್ನ ವಿರುದ್ಧ ದೂರು ಕೊಟ್ಟಿರುವ ವಿಚಾರ ನನಗೆ ಗೊತ್ತಿಲ್ಲ. ನಿ.ಎಂ. 1 ದಾಖಲಾತಿಯನ್ನು ನಾನು ಈ ಹಿಂದೆ ನೋಡಿರುವುದಿಲ್ಲ. ಅದರಲ್ಲಿ ಯಾರ ಸಹಿ ಇದೆ ಎಂದರೆ ಈಗ ನೋಡಲಾಗಿ ಅದರಲ್ಲಿ ಸಂತೋಷ ದೇವಾಡಿಗ ಎಂದು ಬರೆಯಲಾಗಿದೆ ಎಂದು ಸಾಕ್ಷಿ ನುಡಿದಿರುತ್ತಾರೆ. ಸಂತೋಷ ದೇವಾಡಿಗನನ್ನು ಸಾಕ್ಷಿಯನ್ನಾಗಿ ನಾನು ಕರೆಯಿಸಬಹುದಾ ಎಂದರೆ ಅದು ಎದುರುದಾರ ಕಂಪನಿಗೆ ಸಂಬಂಧಪಟ್ಟ ವಿಚಾರ ನನಗೆ ಅವನ ಪರಿಚಯ ಇದೆ ಎಂಬುದನ್ನು ಬಿಟ್ಟರೆ ಬೇರೆ ಯಾವುದೇ ಸ್ನೇಹ ಇರುವುದಿಲ್ಲ. ಕರಿಬಸಪ್ಪ ನನ್ನ ಮೇಲ್ವಿಚಾರಕ ಆಗಿದ್ದರು. ಕರಿಬಸಪ್ಪರವರ ಜೊತೆ ನನ್ನ ಸಂಬಂಧ ಆಗ ಚೆನ್ನಾಗಿ ಇತ್ತು ಎಂದರೆ ಹೌದು . ಈಗ ತೋರಿಸಿದ ನಿ.ಎಂ. 2 ದಾಖಲಾತಿಯನ್ನು ನಾನು ಹಿಂದೆ ನೋಡಿರುವುದಿಲ್ಲ. ಅದರಲ್ಲಿ ತೋರಿಸಿದ ಸಹಿ ಯಾರದ್ದು ಎಂದರೆ ಸಾಕ್ಷಿಯು ದಾಖಲಾತಿಯನ್ನು ನೋಡಿ ಅದರಲ್ಲಿ ಕರಿಬಸಪ್ಪ ಎಂದು ಬರೆಯಲಾಗಿದೆ ಎಂದು ನುಡಿದಿರುತ್ತಾರೆ. ದಿನಾಂಕ 11.09.2015 ರಂದು ಶೈಲೇಶ್ ತೆಂಡೂಲ್ಕರ್ ರವರು ನಿ.ಎಂ. 1 ಮತ್ತು 2 ದಾಖಲಾತಿಗಳನ್ನು ನನಗೆ ಕೊಡಲು ಬಂದಾಗ ನಾನು ಅವುಗಳನ್ನು ತೆಗೆದುಕೊಳ್ಳಲಿಲ್ಲ ಎಂದರೆ ಸುಳ್ಳು . ನಾನು ಅವರಿಬ್ಬರಿಗೂ ಕಾರ್ಖಾನೆಯಿಂದ ಹೊರಗಡೆ ಹೊಡೆದಿದ್ದರಿಂದ ಅವರನ್ನು ಹೊರಗಡೆ ಬಂದರೆ ನೋಡಿಕೊಳ್ಳುತ್ತೇನೆ ಎಂದು ಹೇಳಿ ನಿ.ಎಂ. 1 ಮತ್ತು 2 ಅನ್ನು ನಾನು ತೆಗೆದುಕೊಳ್ಳಲಿಲ್ಲ ಎಂದರೆ ಸುಳ್ಳು . ನನ್ನ ವಿರುದ್ಧ ಅವರು ಕೊಟ್ಟಿರುವ ದೂರು ಇದ್ದ ಕಾರಣ ನಾನು ನಿ.ಎಂ. 1 ಮತ್ತು 2 ಅನ್ನು ತೆಗೆದುಕೊಂಡಿಲ್ಲ ಎಂದರೆ ಸುಳ್ಳು . ನಾನು ಆ ದಿನ ಶೈಲೇಶ್ ತೆಂಡೂಲ್ಕರ್ ಗೆ

ನೀನು ಹೊರಗಡೆ ಬಾ ನೋಡಿಕೊಳ್ಳುತ್ತೇನೆ ಎಂದು ಹೇಳಿದೆ ಎಂದರೆ ಸುಳ್ಳು . ನನ್ನನ್ನು ನೌಕರಿಯಿಂದ ವಜಾ ಮಾಡಿದ ವಿಚಾರ ದಿನಾಂಕ 15.09.2015 ರಂದು ನನಗೆ ಗೊತ್ತಾಯಿತು. ಈಗ ತೋರಿಸಿದ ನಿ.ಎಂ. 5 ದಾಖಲಾತಿಯನ್ನು ನಾನು ಆಗ ಪಡೆದಿದ್ದೇನೆ ಎಂದರೆ ಸುಳ್ಳು . ನಾನು ದಿನಾಂಕ 14.09.2015 ರಂದು ನಿ.ಎಂ. 5 ಅನ್ನು ಪಡೆದಿದ್ದೇನೆ ಎಂದರೆ ಸುಳ್ಳು . ಸಾಕ್ಷಿಗೆ ಅವರ ಮುಖ್ಯ ವಿಚಾರಣೆಯ ಪ್ರಮಾಣ ಪತ್ರ ತೋರಿಸಿ ಅದರಲ್ಲಿರುವ ರುಜು ಸಾಕ್ಷಿಯದ್ದಾ ಎಂದು ಕೇಳಿದ್ದು ಹೌದು ಎಂದು ಸಾಕ್ಷಿ ಒಪ್ಪಿರುತ್ತಾರೆ. ನಿ.ಎಂ. 8 ರಲ್ಲಿ ಇರುವ ರುಜು ನನ್ನದ್ದು ಎಂದರೆ ಸುಳ್ಳು . ನಿ.ಎಂ. 7 ರಲ್ಲಿ ತೋರಿಸಿದ ರುಜು ನನ್ನದು ಎಂದರೆ ಸುಳ್ಳು . ಸಾಕ್ಷಿಗೆ ನಿ.ಎಂ. 5 ಅನ್ನು ಪುನಃ ತೋರಿಸಿದ್ದು ಅದರಲ್ಲಿ ತನ್ನ ರುಜು ಇದೆ ಎಂದು ಸಾಕ್ಷಿ ಗುರುತಿಸಿ ಒಪ್ಪಿದ್ದಾರೆ. ಆದ್ದರಿಂದ ಸಾಕ್ಷಿ ತನ್ನದು ಎಂದು ಒಪ್ಪಿದ ಆ ರುಜುವನ್ನು ನಿ.ಎಂ. 5(ಬಿ) ಎಂದು ಗುರುತಿಸಲಾಯಿತು.

6. ದಿನಾಂಕ 11.09.2015 ರಂದು ನಾನು ಗಲಾಟೆ ಮಾಡಿ ವಿಚಾರಣೆ ಕಾಲಕ್ಕೆ ವಿಚಾರಣೆ ನಡೆಸಲು ಅವಕಾಶ ಕೊಡಲಿಲ್ಲ ಎಂದರೆ ಸುಳ್ಳು . ಆ ದಿನ ನಾನು ಶೈಲೇಶ್ ತೆಂಡೂಲ್ಕರ್ ರವರ ಮೇಜನ್ನು ಎರಡೂ ಕೈಯಿಂದ ಗುದ್ದಿ ಹೇಗೆ ನೀನು ವಿಚಾರಣೆ ನಡೆಸುತ್ತಿಯಾ ನಾನು ನೋಡುತ್ತೇನೆ ಎಂದು ಹೇಳಿದೆ ಎಂದರೆ ಸುಳ್ಳು . ಅದೇ ದಿನ ನಾನು ಪ್ಲಾಸ್ಟಿಕ್ ಕುರ್ಚಿಯಿಂದ ಶೈಲೇಶ್ ತೆಂಡೂಲ್ಕರ್ ಗೆ ಹೊಡೆಯಲು ಹೋದೆ ಎಂದರೆ ಸುಳ್ಳು . ಆ ಸಮಯಕ್ಕೆ ಕರಿಬಸಪ್ಪ ಮತ್ತು ಸಂತೋಷ ದೇವಾಡಿಗ ನನ್ನನ್ನು ಹಿಡಿದುಕೊಂಡರು ಮತ್ತು ಹೊಡೆಯಲು ನನಗೆ ಅವಕಾಶ ಕೊಡಲಿಲ್ಲ ಎಂದರೆ ಸುಳ್ಳು .

7. ನಾನು ದೋಷಾರೋಪಣಾ ಪಟ್ಟಿಯನ್ನು ತೆಗೆದುಕೊಳ್ಳಲಿಲ್ಲ ಎಂದರೆ ಸುಳ್ಳು . ಕಂಪನಿಯಲ್ಲಿ ಇತರೇ ನೌಕರರಿಗೆ ಬೈಯ್ಯುವುದು ಮತ್ತು ಹೆದರಿಸುವುದನ್ನು ನಾನು ಮೊದಲಿನಿಂದ ಮಾಡುತ್ತಿದ್ದೆ ಎಂದರೆ ಸುಳ್ಳು . ನಾನು ವಿಚಾರಣಾ ವರದಿಯನ್ನು ತೆಗೆದುಕೊಳ್ಳಲಿಲ್ಲ ಎಂದರೆ ಸುಳ್ಳು . ಇದೆಲ್ಲಾ ಗಲಾಟೆಯಾದ ಮೇಲೆ ನಾನಾಗಿಯೇ ಕೆಲಸಕ್ಕೆ ಹಾಜರಾಗುವುದನ್ನು ಬಂದ್ ಮಾಡಿದೆ ಎಂದರೆ ಸುಳ್ಳು . ಗಲಾಟೆಯಾದ ಮೇಲೆ ಕಂಪನಿಯವರು ಪೊಲೀಸ್ ನವರಿಗೆ ದೂರು ಕೊಡುತ್ತಾರೆ ಎಂಬ ಭಯಕ್ಕೆ ನಾನು ಕೆಲಸಕ್ಕೆ

ಬರಲಿಲ್ಲ ಎಂದರೆ ಸುಳ್ಳು . ದಿನಾಂಕ 15.09.2015 ರಂದು ನಾನು ಶೈಲೇಶ್ ತೆಂಡೂಲ್ಕರ್ ರವರ ಕಚೇರಿಗೆ ಬಂದಿಲ್ಲ ಎಂದರೆ ನಾನು ಕಾರ್ಖಾನೆ ಬಳಿ ಬಂದೆ ಆದರೆ ಭದ್ರತಾ ಕೊಠಡಿ ಬಳಿಯೇ ನನ್ನನ್ನು ತಡೆದು ಒಳಗೆ ಹೋಗಲು ಅನುಮತಿ ಕೊಡಲಿಲ್ಲ. ನಾನು ನೌಕರಿಗೆ ಹಾಜರಾಗದೇ ನೇರವಾಗಿ ಕಾರ್ಮಿಕ ಅಧಿಕಾರಿ ಬಳಿ ನನಗೆ ರೂ. 15,00,000/– ಪರಿಹಾರ ಕೊಡಿಸಬೇಕು ಎಂದು ಅರ್ಜಿ ಕೊಟ್ಟೆ ಎಂದರೆ ಸುಳ್ಳು . ಶೈಲೇಶ್ ತೆಂಡೂಲ್ಕರ್ ರವರು ವಿಚಾರಣೆ ಕಾಲದಲ್ಲಿ ನನ್ನ ಹೇಳಿಕೆ ಪಡೆಯುವಾಗ ಅದಕ್ಕೆ ನಾನು ಅವಕಾಶ ಮಾಡಿಕೊಟ್ಟೆ ಎಂದರೆ ಸುಳ್ಳು ಅವರು ನನ್ನನ್ನು ವಿಚಾರಣೆ ಮಾಡಿಯೇ ಇರುವುದಿಲ್ಲ. ಶೈಲೇಶ್ ತೆಂಡೂಲ್ಕರ್ ವಿಚಾರಣೆ ನಡೆಸುವಾಗ ನಾನು ನನ್ನ ಕಡೆ ಸಾಕ್ಷಿ ವಿಚಾರಣೆ ಮಾಡುತ್ತೇನೆ ಎಂದು ಹೇಳಿದ್ದೆ ಎಂದರೆ ಸುಳ್ಳು . ನಾನು ಸಂತೋಷ ದೇವಾಡಿಗ ಮತ್ತು ಕರಿಬಸಪ್ಪರವರಿಗೆ ಅವರು ದೂರು ಕೊಟ್ಟಿದ್ದರಿಂದ ಹೊರಗಡೆ ಬಂದ ಮೇಲೆ ನೋಡಿಕೊಳ್ಳುತ್ತೇನೆ ಎಂದು ಹೇಳಿದೆ ಎಂದರೆ ಸುಳ್ಳು . ನನ್ನ ವಿರುದ್ಧ ವಿಚಾರಣೆ ಸರಿಯಾಗಿ ಮಾಡಿಲ್ಲ ಎಂದು ನಾನು ಕಂಪನಿಯ ನಿರ್ದೇಶಕರಿಗೆ ಮನವಿ ಸಲ್ಲಿಸಿಲ್ಲ ಎಂದರೆ ನನಗೆ ನೌಕರಿಯಿಂದ ತೆಗೆದ ಕೂಡಲೇ ನಾನು ನೇರವಾಗಿ ವಕೀಲರ ಬಳಿ ಹೋಗಿ ಅದನ್ನು ತೋರಿಸಿದೆ . ಕಂಪನಿಯ ನಿರ್ದೇಶಕರಿಗೆ ನಾನು ಮನವಿ ಸಲ್ಲಿಸಲಿಲ್ಲ. ದಿನಾಂಕ 11.09.2015 ರಂದು ವಿಚಾರಣೆ ಮಾಡುವುದಾಗಿ ಹೇಳಿರಲಿಲ್ಲವಾದರೂ ನಾನು ಶೈಲೇಶ್ ತೆಂಡೂಲ್ಕರ್ ಕಚೇರಿಗೆ ಹೋಗಿದ್ದೆ ಎಂದರೆ ಸುಳ್ಳು . ನನ್ನ ವಿರುದ್ಧ ವಿಚಾರಣೆ ಮಾಡಲು ಎಲ್ಲಾ ಕ್ರಮ ಅನುಸರಿಸಿದ್ದರೂ ನಾನು ಅಲ್ಲಿ ಹೋಗಿ ವಿಚಾರಣೆ ಮಾಡಲು ನಡೆಯದಂತೆ ಗಲಾಟೆ ಮಾಡಿ ವಿಚಾರಣೆ ಆಗದಂತೆ ನಿಲ್ಲಿಸಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮೂಲಕ ಬೆರಳಚ್ಚು ಮಾಡಿಸಲಾಗಿದೆ)

ಓ.ಹೇ.ಕೇ.ಸ.ಇ.

(ಡಿ.ಎಸ್. ವಿಜಯಕುಮಾರ್)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉತ್ತರ ಕನ್ನಡ , ಕಾರವಾರ.